ದಿನಾಂಕ **02-08-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಃ ಸ.ಸ.ಅ. ಅವರಿಂದ

ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ 3 ಭಾವಚಿತ್ರಗಳನ್ನು ನೋಡಿ ಅವುಗಳು ತನ್ನ ಮನೆಯಲ್ಲಿ ಕಳ್ಳತನವಾದ ಬಂಗಾರದ ಆಭರಣಗಳನ್ನು ಪೋಲೀಸ್ ಠಾಣೆಯಲ್ಲಿ ಬಿಡುಗಡೆಗೊಳಿಸುವ ಕಾಲಕ್ಕೆ ತೆಗೆದ ಭಾವಚಿತ್ರಗಳೆಂದು ನುಡಿದಿದ್ದರಿಂದ ಅವುಗಳನ್ನು ಕ್ರಮವಾಗಿ ನಿ.ಪಿ. 10 ರಿಂದ 12 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಒಂದು ಗುಲಾಬಿ ಬಣ್ಣದ ಸಣ್ಣ ಬ್ಯಾಗ್, ಆಭರಣ ಇಡುವ ಒಂದು ಡಬ್ಬಿ, ಒಂದು ಬೀಗ, ಬೀಗ ಒಡೆಯಲು ಉಪಯೋಗಿಸಿದರೆನ್ನಲಾದ ಎರಡು ರಾಡ್‌ಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಪೋಲೀಸರು ನನ್ನನ್ನು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಒಳಪಡಿಸಿರುತ್ತಾರೆ ಮತ್ತು ನಾನು ಹೇಳಿಕೆ ನೀಡಿರುತ್ತೇನೆ. ನಾನು ಪೋಲೀಸ್ ಠಾಣೆಗೆ ಹೋದಾಗ ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನನಗೆ ಪೋಲೀಸರು ಆ ದಿನ ಠಾಣೆಯಲ್ಲಿ ತೋರಿಸಿದ್ದರು. ಆ ಕಾಲಕ್ಕೆ ಆರೋಪಿ ಉಪಯೋಗಿಸಿರುವ ವಾಹನವನ್ನು ಸಹ ತೋರಿಸಿದ್ದರು. ಹಾಗೂ ಸಿ.ಸಿ ಟಿವಿ ಫೋಟೇಜ್‌ನಲ್ಲಿ ನಾನು ನೋಡಿರುವ ವ್ಯಕ್ತಿ ಹಾಗೂ ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಇಬ್ಬರು ಒಂದೇ ಇರುತ್ತಾರೆ. ಸಾಕ್ಷಿ ವಾಹನ ಜಪ್ತುಪಂಚನಾಮೆ ಕಾಲಕ್ಕೆ ತೆಗೆದರೆನ್ನಲಾದ 7 ಭಾವಚಿತ್ರಗಳನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅವುಗಳನ್ನು ನಿ.ಪಿ. 13 ರಿಂದ 19 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ತನಿಖಾಧಿಕಾರಿ ಹಾಜರುಪಡಿಸಿದ ಸಿ.ಡಿಯನ್ನು ಲ್ಯಾಪ್‌ಟಾಪ್‌ನಲ್ಲಿ ತೋರಿಸಲಾಗಿ ಸಾಕ್ಷಿ ಸದರಿ ಸಿ.ಡಿಯಲ್ಲಿರುವ ದೃಶ್ಯಾವಳಿಗಳನ್ನು ಮತ್ತು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಸದರಿ ಸಿ.ಡಿ.ಯನ್ನು ನಿ.ಪಿ. 20 ಎಂದು ಗುರುತಿಸಲಾಯಿತು. ನಿ.ಪಿ. 20 ರಲ್ಲಿ ಆರೋಪಿತನು ಕೃತ್ಯಕ್ಕೆ ಬಳಸಿದ ರಾಡ್‌ಗಳನ್ನು ತೆಗೆದುಕೊಳ್ಳುತ್ತಿರುವ ದೃಶ್ಯಗಳನ್ನು ಒಳಗೊಂಡಿದೆ. ಮತ್ತು ಭಾವಚಿತ್ರಗಳ ಪೈಕಿ ಒಂದು ಭಾವಚಿತ್ರ ನಮ್ಮ ಮನೆಯಲ್ಲಿ ಕಳ್ಳತನ ಆದ ಭಾವಚಿತ್ರ ಇರುತ್ತದೆ. ಇನ್ನೊಂದು ವಿಡಿಯೋ ತುಣುಕಿನಲ್ಲಿ ಆರೋಪಿತನು ಇರುತ್ತಾನೆ. ಆರೋಪಿತನನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾನೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿರುತ್ತಾರೆ, ನೀಡಿ ಮುಂದೂಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,
ಸಿಂಧನೂರು.